

ಕುಳಿತಿದೆ 'ಹಾಲ್‌ಸ್ಟಾಟರ್ ಸೀ' ಎನ್ನುವ ಕನ್ನಡಿಸದೃಶ ಸರೋವರದ ದಡದಲ್ಲಿ. ಇಷ್ಟೇ ಅಲ್ಲ, 'ಡಾಕ್‌ಸ್ಟೈನ್ ಆಲ್ಪ್ಸ್' ಹೆಸರಿನ ಲೈಮ್‌ಸ್ಟೋನ್ ಪರ್ವತಾವಳಿಯಿಂದ ಸುತ್ತುವರಿದಿದ್ದು, ಅದರ ಪದತಲದಲ್ಲಿ ಹಾಯಾಗಿ ಒರಗಿರುವ ಈ ಹಳ್ಳಿಗೆ ಈ ಪರ್ವತಾವಳಿಯ ಹಿನ್ನೆಲೆ ಹೊನ್ನಿನ ಕಳಶದಂತೆ!

ನಾವು ಜರ್ಮನಿಯ ಮ್ಯೂನಿಕ್ ನಗರದಿಂದ ಎರಡೂವರೆ ಗಂಟೆ ದೂರದಲ್ಲಿರುವ ಈ ಸೌಂದರ್ಯಸೀಮೆಯನ್ನು ಕಾಣಲು ಹೊರಟಿದ್ದು ಕಾರಿನಲ್ಲಿ. ಪ್ರಖರವಾಗಿ ಬೆಳಗುವ ಸೂರ್ಯನ ಬಿಸಿಲು ಕಾಡಿದರೂ, ಮುಕ್ಕಾಲು ಗಂಟೆ ಮ್ಯೂನಿಕ್ಕಿನ ಆಟೋಬಾನ್(ಹೈವೇ)ನಲ್ಲಿ ಪಯಣ ಮಾಡಿದ ಮೇಲೆ ಹಾದಿಯ ಎರಡೂ ಬದಿ ಕಣ್ಣೆದುರು ಬಿಚ್ಚುತ್ತಾ ಹೋದ ಆಸ್ಟ್ರಿಯಾದ ಅಸೀಮ ಭೂಭಾಗದ ಸೌಂದರ್ಯ ನೋಡುತ್ತಾ ನಾನಂತೂ ಮರುಳಾಗಿಹೋದೆ.

ಹಾದಿಯ ಪಕ್ಕದಲ್ಲಿ ದೂರದವರೆಗೂ ಏರುತ್ತಾ ಹೋದಂತಿರುವ ಹುಲ್ಲುಗಾವಲು, ಗುಡ್ಡ, ಪರ್ವತಾವಳಿಯ ಸಾಲು ಸಾಲು, ಅವುಗಳ ಮೈತುಂಬಾ ಕೋನಿಫೆರಸ್, ಪೈನ್ ಜಾತಿಯ ಮರಗಳ ದಟ್ಟ ಕಾಡು, ನಡುನಡುವೆ ಪರ್ವತದ ಎದೆಯ ಮೇಲೇ ಪುಟ್ಟಪುಟ್ಟ ಮನೆಗಳಿರುವ ಹಳ್ಳಿ, ಚೂಪು ಗೋಪುರದ ಕೆಥೋಲಿಕ್ ಚಾಪೆಲ್‌ಗಳು, ಹಸಿರಲ್ಲಿ ಮೇಯುವ ಹಸು–ಕುರಿಮಂದೆಗಳು, ಪರ್ವತಗಳ ಮೈಮೇಲಾಡುವ ಮೇಘಗಳು ಅಬ್ಬಾ, ಇಂಥವೇ ದೃಶ್ಯಗಳು ಮುಂದಿನ ಒಂದೂವರೆ ಗಂಟೆ ಕಾಲ. ನಿಜಕ್ಕೂ ಆಸ್ಟ್ರಿಯಾ ಭೂಭಾಗದ ಇಂಚಿಂಚೂ ಹೊಸತನ ಬಿರಿವ ಚೆಲುವನ್ನು ಮೊಗೆಮೊಗೆದು ಸುರಿದಿತ್ತು. ಬಿಟ್ಟ ಕಣ್ಣು ಮುಚ್ಚದಂತೆ ಮೈಮರೆಸುತ್ತಾ, 'ಹಾಲ್‌ಸ್ಟಾಟ್' ಹಳ್ಳಿಯ ಹೊಸ್ತಿಲವರೆಗೂ ಬಂದಾಗ, ಕಣ್ಣು ಮೈಮನ ಲಹರಿಯಲ್ಲಿ ತೇಲಿತ್ತು.

ಎಡಭಾಗದಲ್ಲಿ ಎತ್ತರೆತ್ತರ ಪರ್ವತಗಳ ಕೆಳಗೆ ಪುಟ್ಟ ಹಳ್ಳಿಯೊಂದು ಮಲಗಿತ್ತು, ಅಮ್ಮನ ಮಡಿಲಲ್ಲಿ ಮಲಗಿದ ಹಸುಗಂದನಂತೆ. ಅದರ ಮುಂದೆ ಮೈಚಾಚಿ ಮಲಗಿ ಹರಿಯುತ್ತಿತ್ತು ಥಳಥಳ ನೀಲಸರೋವರ 'ವಾಹ್' ಎಂದು ಕಿರುಚಿದ್ದೆ ಖುಷಿಯಾಗಿ, ಇದೇ 'ಹಾಲ್‌ಸ್ಟಾಟ್' ಎಂದು ತಿಳಿದು. 'ಅಮ್ಮಾ, ಇದಲ್ಲ ಹಾಲ್‌ಸ್ಟಾಟ್. ಮುಂದಿದೆ' ಮಗಳ ದನಿ ಕೇಳಿದಾಗ, 'ಅರೇ, ಹೌದಾ?' ಸ್ವಗತಿಸಿಕೊಂಡರೂ, ಅಲ್ಲಿಂದ ಕಣ್ಣು ಕೀಲಿಸಲಾಗಲಿಲ್ಲ. ಸರೋವರದ ದಡದಲ್ಲೇ ಕಾರು ಸರಿಯುತ್ತಿತ್ತು ನಿಧಾನವಾಗಿ. ಹತ್ತು ನಿಮಿಷ ಅಷ್ಟೇ, ಕಾರಿನ ಬಲ ಕಿಟಕಿಯಿಂದ ನೋಟಕ್ಕೆ ಕಂಡಿದ್ದು, ಕಿನ್ನರಲೋಕ 'ಹಾಲ್‌ಸ್ಟಾಟ್'.

'ಯುನೆಸ್ಕೊ ವರ್ಲ್ಡ್ ಹೆರಿಟೇಜ್' ವ್ಯಾಪ್ತಿಗೆ ಸೇರಿರುವ ಈ ಪ್ರದೇಶ ಸುಮಾರು 7000 ವರ್ಷಗಳ ಹಿಂದೆಯೇ ಅಸ್ತಿತ್ವದಲ್ಲಿದ್ದ ದಾಖಲೆಯಿದೆ. ಈ ಹಳ್ಳಿ ಸರ್ವಾಂಗೀಣ ಸಮೃದ್ಧಿಯಲ್ಲಿ ರೂಪುಗೊಳ್ಳಲು ಕಾರಣ ಕ್ರಿ.ಪೂ. 5000ರಲ್ಲೇ ಇಲ್ಲಿ ನಡೆಯುತ್ತಿದ್ದ ಉಪ್ಪಿನ ಗಣಿಗಾರಿಕೆ. 'ವಿಶ್ವದ ಮೊದಲ ಉಪ್ಪಿನ ಗಣಿ' ಎಂದು ಗುರುತಿಸಿಕೊಂಡಿದೆ.

ಜೊತೆಗೆ, ಈ ಉಪ್ಪು ಇಲ್ಲಿನ 'ವೈಟ್ ಗೋಲ್ಡ್' ಎಂದು ಕರೆಸಿಕೊಂಡು ಶ್ರೀಮಂತಿಕೆಯ ಆದಾಯಮೂಲವೂ ಆಗಿದೆ. ಈ ಹಳ್ಳಿಯ ತುಂಬಾ ಮುಗಿಬಿದ್ದ ಸೌಂದರ್ಯ, ಆಲ್ಪೈನ್ ಕಲ್ಚರ್, ಇತಿಹಾಸ ಇವನ್ನೆಲ್ಲ ಕಂಡು ಯುನೆಸ್ಕೊ 'ಹಾಲ್‌ಸ್ಟಾಟ್ ಕಾಣುವ ಅವಕಾಶವನ್ನು ಯಾರೂ ತಪ್ಪಿಸಿಕೊಳ್ಳಬಾರದು' ಎಂದು ಬಣ್ಣಿಸಿದೆ. ಕೇವಲ 700–800ರ ಆಸುಪಾಸಿನ ಜನಸಂಖ್ಯೆಯಿರುವ ಹಳ್ಳಿಗೆ ದಿನನಿತ್ಯ ಭೇಟಿ ಕೊಡುವ ಪ್ರವಾಸಿಗರ ಸಂಖ್ಯೆ 10ರಿಂದ 20 ಸಾವಿರ!

ಹ್ಞಾಂ, ಯಾವ ಋತುವಿನಲ್ಲಾದರೂ ಈ ಹಳ್ಳಿಯ ವಿಹಾರಕ್ಕೆ ಹೋಗಬಹುದು. ಮುಗಿಲೆತ್ತರಕ್ಕೆ ನಿಂತ ಪರ್ವತಸಾಲು, ಹಸುರು ದಟ್ಟ ಕಾಡು, ಎಲೆಗಳು ಬಣ್ಣ ಬದಲಿಸುವ ಶರದೃತು, ಹಿಮಮಯವಾಗಿ ಧವಳಲೋಕವಾಗುವ ಚಳಿಗಾಲ, ಬಣ್ಣಬಣ್ಣದ ಹೂಗಳು, ವಸಂತ–ಬೇಸಿಗೆ, ಹೀಗೆ ಎಲ್ಲಕ್ಕೂ ಜೈ ಎನ್ನುವ ಇಲ್ಲಿ ಆಯಾ ಋತುವಿಗೆ ತಕ್ಕನಾದ ಸಾಹಸ ಕ್ರೀಡೆಗಳು, ವಿಹಾರ ಚಟುವಟಿಕೆಗಳು, ಟ್ರೆಕ್ಕಿಂಗ್–ವಾಕಿಂಗ್–ಸ್ಕೀಯಿಂಗ್–ಬೋಟಿಂಗ್, ಸಾಲ್ಟ್‌ಮೈನ್ ಟೂರ್, ಐಸ್‌ಕೇವ್ ವೀಕ್ಷಣೆ, ಪ್ರಕೃತಿಯೊಂದಿಗೆ ಅನುಭವಿಸಬಹುದಾದ ನಿರಾಳತೆ... ಇಹದ ಜಂಜಾಟದಿಂದ ಕೆಲ ಕಾಲವಾದರೂ ಮುಕ್ತಗೊಳಿಸುವ

